## ಕರ್ನಾಟಕ ಅರಣ್ಯ ಇಲಾಖೆ

ಕ್ರಸಂ:ಬಿ2/ಜಿಎಫ್ಎಲ್/3.30/ಸಿಆರ್-139/2016-17/741

ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ
ಬಾಗಲಕೋಟ ವಿಭಾಗ, ಬಾಗಲಕೋಟ
ದಿನಾಂಕ: 6 /08/2021.

ಇವರಿಗೆ,

ಸೀನಿಯರ್ ಜನರಲ್ ಮ್ಯಾನೇಜರ್,
ಜೆಮ್ ಶುಗರ್ಸ್ ಲಿಮಿಟೆಡ್, ಕುಂದರಗಿ,
ತಾ: ಬೀಳಗಿ, ಜಿ: ಬಾಗಲಕೋಟ.

ಮಾನ್ಯರೆ,

ವಿಷಯ: Diviersion of 3.30 ha. of forest land in sy no. 162 of Kundaragi village of construction of road from cane yard to Gem Sugars Ltd to Kundaragi Janamath main Road, Bilagi taluk, in favour of M/s Gem Sugars Limited Kundaragi **(FP/KA/IND/20069/2016).**

ಉಲ್ಲೇಖ:
1) ಈ ಕಛೇರಿ ಪತ್ರ ಸಂಖ್ಯೆ: ಬಿ2/ಜಿಎಫ್ಎಲ್/3.30/ಸಿಆರ್-139/2016-17/2056/ ದಿನಾಂಕ: 11-01-2018.
2) ಈ ಕಛೇರಿ ಪತ್ರ ಸಂಖ್ಯೆ: ಬಿ2/ಜಿಎಫ್ಎಲ್/3.30/ಸಿಆರ್-139/2016-17/1418/ ದಿನಾಂಕ: 08-01-2020.
3) ನಿಮ್ಮ ಪತ್ರ ಸಂಖ್ಯೆ :ಜೆಶುಲಿ/ಆಡ್ಮಿನ್/2019-20/1738 ದಿನಾಂಕ: 12-02-2020 & 18-07-2020.

– **** –

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೀಳಗಿ ವಲಯದ ಕುಂದರಗಿ ಅ.ಸ.ನಂ. 162 ರಲ್ಲಿ 3.30 ಹೆಕ್ಟೇರ್ ಅರಣ್ಯ ಪ್ರದೇಶ ಬಿಡುಗಡೆಗೆ ಸಂಬಂಧಿಸಿದಂತೆ, ನೀವು ಸಲ್ಲಿಸಿರುವ ಪ್ರಸ್ತಾವನೆ ಸಂಖ್ಯೆ: **FP/KA/IND/20069/2016** ಪ್ರಸ್ತಾವನೆಯು ಆನ್‌ಲೈನ್‌ನಲ್ಲಿ ಬಾಕಿ ಉಳಿದಿದ್ದು, ಉಲ್ಲೇಖ (1) & (2) ರ ಪತ್ರಗಳಡಿ ಹನಗಂಡಿ ರಿ.ಸ.ನಂ. 13 ರಲ್ಲಿ ಗುರುತಿಸಲಾಗಿರುವ ಅರಣ್ಯೇತರ ಜಮೀನು ನೆಡುತೋಪು ಬೆಳೆಸಲು ಯೋಗ್ಯವಿಲ್ಲದಿರುವ ಪ್ರಯುಕ್ತ ಪರ್ಯಾಯ ಅರಣ್ಯೇತರ ಜಮೀನು ಗುರುತಿಸಿ ಇಲಾಖೆಗೆ ಹಸ್ತಾಂತರಿಸಲು ನಿರ್ದೇಶನ ನೀಡಲಾಗಿತ್ತು.

ಈ ಕುರಿತು ನೀವು ಉಲ್ಲೇಖ (3)ರಡಿ ಹನಗಂಡಿ ಸರ್ವೆ ನಂ. 13 ರಲ್ಲಿ 7.26 ಎ/ಗು ಅರಣ್ಯೇತರ ಪ್ರದೇಶವನ್ನು ಗುರುತಿಸಿ ಇಲಾಖೆಗೆ ಹಸ್ತಾಂತರಿಸಲಾಗಿರುತ್ತದೆ. ಪ್ರಸ್ತುತ ಸಮಯದಲ್ಲಿ ಪರ್ಯಾಯ ಅರಣ್ಯೇತರ ಪ್ರದೇಶವನ್ನು ಗುರುತಿಸಿ ಇಲಾಖೆಗೆ ಹಸ್ತಾಂತರಿಸುವುದು ಕಷ್ಟಸಾಧ್ಯವಾಗಿರುವುದರಿಂದ ಇಲಾಖೆಯ ವತಿಯಿಂದ ಕ್ಷೀಣೀತ ಅರಣ್ಯ ಪ್ರದೇಶವನ್ನು ಗುರುತಿಸಿದಲ್ಲಿ ಪರಿಹಾರಾತ್ಮಕ ನೆಡುತೋಪು ಬೆಳೆಸಲು ತಗಲುವ ವೆಚ್ಚವನ್ನು ಪಾವತಿಸುವುದಾಗಿ ತಿಳಿಸಿರುತ್ತೀರಿ. ನಿಮ್ಮ ಮನವಿಯ ಕುರಿತು ಪರಿಶೀಲಿಸಲಾಗಿ, ಅರಣ್ಯ ಪ್ರದೇಶವನ್ನು ಖಾಸಗಿಯವರಿಗೆ ಬಿಡುಗಡೆ ಮಾಡಿದ ಸಂದರ್ಭದಲ್ಲಿ, ಪರಿಹಾರಾತ್ಮಕ ನೆಡುತೋಪು ಬೆಳೆಸಲು ಕ್ಷೀಣಿತ ಅರಣ್ಯ ಪ್ರದೇಶದಲ್ಲಿ ನೆಡುತೋಪು ಬೆಳೆಸಲು ಅವಕಾಶವಿರುವುದಿಲ್ಲ. ಕಾರಣ ಸದರಿ ನೀವು ಸಲ್ಲಿಸಿರುವ ಮನವಿಯನ್ನು ಪರಿಗಣಿಸಲು ಸಾಧ್ಯವಿರುವುದಿಲ್ಲ. ಆದ್ದರಿಂದ ಅನವಶ್ಯಕ ವಿಳಂಬ ಮಾಡದೇ ಪರ್ಯಾಯ ಅರಣ್ಯೇತರ ಜಮೀನನ್ನು ಗುರುತಿಸಿ ಇಲಾಖೆಗೆ ಹಸ್ತಾಂತರಿಸಲು ಮತ್ತೊಮ್ಮೆ ತಿಳಿಸಿದೆ.

ತಮ್ಮ ವಿಶ್ವಾಸಿ
**ಸಹಿ/-**
ಉಪ ಅರಣ್ಯ ಸಂರಕ್ಷಣಾಧಿಕಾರಿ
ಬಾಗಲಕೋಟ ವಿಭಾಗ, ಬಾಗಲಕೋಟ.

ಪ್ರತಿಯನ್ನು ಮಾನ್ಯ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಸಂರಕ್ಷಣೆ), ಬೆಂಗಳೂರು ಇವರಿಗೆ ಮಾಹಿತಿಗಾಗಿ ಗೌರವಗಳೊಂದಿಗೆ ಸಲ್ಲಿಸಲಾಗಿದೆ.

ಪ್ರತಿಯನ್ನು ಮಾನ್ಯ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಬೆಳಗಾವಿ ವೃತ್ತ, ಬೆಳಗಾವಿ ಇವರಿಗೆ ಮಾಹಿತಿಗಾಗಿ ಗೌರವಗಳೊಂದಿಗೆ ಸಲ್ಲಿಸಲಾಗಿದೆ.

ಉಪ ಅರಣ್ಯ ಸಂರಕ್ಷಣಾಧಿಕಾರಿ
ಬಾಗಲಕೋಟ ವಿಭಾಗ, ಬಾಗಲಕೋಟ.

ರವಾನಿಸಿದ ದಿನಾಂಕ 6-8-2024

ಗುಮಾಸ್ತರು